<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 137/2020**

| ಸಾಕ್ಷಿಯ ಹೆಸರು | ಶ್ರೀ. ರಾಜೀವ್ | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | ಉಮೇಶ್ | 26 | 13 |
| ವಯಸ್ಸು | 45 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **03.07.2026.** | |
| ಉದ್ಯೋಗ | PI, VVIP Security, Bengaluru | | |
| ವಾಸ ಸ್ಥಳ | ಬೆಂಗಳೂರು | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು Feb 2020 ರಿಂದ Oct 2021 ರವರೆಗೆ ಬ್ಯಾಡರಹಳ್ಳಿ ಪೋಲೀಸ್ ಠಾಣೆಯಲ್ಲಿ ಪಿ.ಐ. ಆಗಿ ಠಾಣೆಯಲ್ಲಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 06.03.2020 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ. 25 ರವರಿಂದ ಪಡೆದುಕೊಂಡು ತನಿಖೆ ಮುಂದುವರಿಸಿರುತ್ತೇನೆ. ಅದೇ ದಿನ ಸಿಬ್ಬಂದಿ ಸತೀಶ್ ರವರು ವಿಕ್ಟೋರಿಯಾ ಆಸ್ಪತ್ರೆಯಿಂದ ಮೃತನ ಪಿ.ಎಂ. ವರದಿ ಮತ್ತು ಮೃತನಿಂದ ವೈದ್ಯರು ಸಂಗ್ರಹಿಸಿಕೊಟ್ಟ ಬಟ್ಟೆಗಳನ್ನು ತಂದು ಹಾಜರು ಪಡಿಸಿದ್ದು ಅದನ್ನು ಸ್ವೀಕರಿಸಿ ಮಾಲುಪಟ್ಟಿ ಸಂಖ್ಯೆ 28/2020 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ತೋರಿಸಲಾಗಿದೆ. ಸಾಕ್ಷಿ ಪಿ.ಎಂ. ವರದಿಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಶಾನೆ.ಪಿ. 22 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 22 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಮು.ಮಾ. 1 ರಿಂದ 6 ಅನ್ನು ನೋಡಿ ಗುರುತಿಸಿರುತ್ತಾರೆ.

2. ದಿನಾಂಕ 14.03.2020 ರಂದು ಆರೋಪಿ ನಂ. 5 ರವರು ಉಪಯೋಗಿಸಿದ KA-02/JC-5406 Honda Activa ವಾಹನವನ್ನು ಆರೋಪಿ ನಂ. 5 ರವರು ತಂದೆ ಮಂಜುನಾಥ್ ರವರು ತಂದು ಠಾಣೆಯಲ್ಲಿ ಹಾಜರು ಪಡಿಸಿದ್ದು ಅದನ್ನು ಚಾಸಾ. 13 ಮತ್ತು 14 ರವರನ್ನು ಬರಮಾಡಿಕೊಂಡು ಠಾಣೆಯಲ್ಲಿ ಸಂಜೆ 4.00 ರಿಂದ 5.00 ಗಂಟೆಯವರೆಗೆ ನಿಶಾನೆ.ಪಿ. 17 ರಂತೆ ಮಹಜರ್ ಮಾಡಿ ಸದರಿ

ವಾಹನವನ್ನು ಜಪ್ತಿ ಮಾಡಿರುತ್ತೇನೆ. ನಿಶಾನೆ.ಪಿ. 17 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 7 (ಸಿ) ಎಂದು ಗುರುತಿಸಲಾಯಿತು. ಜಪ್ತಿ ಮಾಡಿದ ವಾಹವನ್ನು ಮಾಲುಪಟ್ಟಿ ಸಂಖ್ಯೆ 30/2020 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ತೋರಿಸಲಾಗಿದೆ. ಅದೇ ದಿನ ಚಾಸಾ. 13 ಮತ್ತು 14 ರವರ ಹೇಳಿಕೆ ಮಾಡಿಕೊಂಡೆ.

3. ದಿನಾಂಕ 12.04.2020 ರಂದು ಆರೋಪಿತರು ಮತ್ತು ಸಾಕ್ಷಿದಾರರು ಉಪಯೋಗಿಸಿದ ಮೊಬೈಲ್ ನ ಕರೆಗಳ CDR ಪಡೆಯಲು ಮನವಿ ಸಲ್ಲಿಸಿರುತ್ತೇನೆ. ಸಾಕ್ಷಿ ಮನವಿ ಪತ್ರವನ್ನು ಗುರುತಿಸಿದ್ದು ನಿಶಾನೆ.ಪಿ. 26 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 26 (ಎ) ಎಂದು ಗುರುತಿಸಲಾಯಿತು. ಆರೋಪಿತರ ವಿರುದ್ಧ ಅಂತಿಮ ವರದಿ ಸಲ್ಲಿಸಿದ್ದೇನೆ. ಫ್ರಾಸಾ. 7 ಮತ್ತು 8 ರವರು ನನ್ನ ಸಮುಂದೆ ನಿಶಾನೆ.ಪಿ. 18 ಮತ್ತು 21 ರಂತೆ ಹೇಳಿಕೆ ನೀಡಿದ್ದಾರೆ.

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು)

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.